

# ಕಣ್ಣಾ ಮುಚ್ಚೆ ಕಾಡೇಗೂಡೆ... ಕಣ್ಣ ಮುಂದೆ ಏನ್ ಬಂತು...?
# ಅಗೋ ನೋಡು(1)



ಇದು ನಿಮಗೆ ಆಶ್ಚರ್ಯವಾಗಬಹುದು, ಆದರೆ ಪ್ರಕೃತಿಯನ್ನು ಅನುಭವಿಸಲು ನೀವು ಹೊರಗೆ ಹೋಗಬೇಕಾಗಿಲ್ಲ! ನಿಮ್ಮ ಮನೆಯ ಸುತ್ತಲೂ, ಕಿಟಕಿಯ ಮೂಲಕ, ಬಾಗಿಲಿನ ಹಿಂದೆ ಅಥವಾ ಹೂಕುಂಡದ ಕೆಳಗೆ ನೋಡಿ - ಕೆಳಗಿನ ಯಾವುದಾದರೂ ಮೂರನ್ನು ನೇರಕ್ಕೆ ಅಥವಾ ಅಡ್ಡಲಾಗಿ ಹುಡುಕಿ ಹಾಗೂ **ಬಿಂಗೊ** ಎಂದು ಹೇಳಿ!




ಈ ಬಿಂಗೊದಲ್ಲಿರುವ ಜೀವಿಗಳು ಮತ್ತು ಸಸ್ಯಗಳ ಬಗ್ಗೆ ನೀವು ಇನ್ನಷ್ಟು ತಿಳಿದುಕೊಳ್ಳಲು ಬಯಸುವಿರಾ? ಕೆಳಗಿನ **ಪ್ರಕೃತಿ ಚಟುವಟಿಕೆಗಳನ್ನು** ಅನ್ವೇಷಿಸಿ!




***ಸಲಹೆ:*** ಪ್ರಿಂಟ್ ಔಟ್ ಅಗತ್ಯವಿಲ್ಲ! ಒಂದು ಕಾಗದದ ಮೇಲೆ ನೀವೇ ಇದನ್ನು ಚಿತ್ರಿಸಿ ಮತ್ತು ಸಂಖ್ಯೆ ಬರೆದು ಬಿಂಗೋ ಆಡಿ!


Nature Classrooms
nature conservation foundation
Maadhyama Aneka ಮಾಧ್ಯಮ ಅನೇಕ

ನೇಚರ್ ಕ್ಲಾಸ್‌ರೂಮ್‌ನಿಂದ ರಚಿಸಲಾಗಿದೆ, ಮಕ್ಕಳು ಮತ್ತು ವಯಸ್ಕರನ್ನು ಪ್ರಕೃತಿಗೆ ಪರಿಚಯಿಸಲು ಲಾಭರಹಿತ ಉಪಕ್ರಮ.This work is licensed to Nature Classrooms under CC BY-SA 4.0 https://creativecommons.org/licenses/by-sa/4.0/

# ಚಟುವಟಿಕೆಗಳು

**ಈಗ ತಲೆ ಓಡಿಸುವ ಸಮಯ! ಈ ವಿಶೇಷ ಚಟುವಟಿಕೆಗಳ ಮೂಲಕ ನಿಮ್ಮ ನೈಸರ್ಗಿಕ ನೆರೆಹೊರೆಯವರನ್ನು ಚೆನ್ನಾಗಿ ತಿಳಿದುಕೊಳ್ಳಿ. ಬಿಂಗೊ ಚೌಕದಲ್ಲಿರುವ ಸಂಖ್ಯೆಗಳ ಮೂಲಕ ಜೀವಿ ಅಥವಾ ಸಸ್ಯಕ್ಕೆ ಈ ಚಟುವಟಿಕೆಯನ್ನು ಹೊಂದಿಸಿ.**

**1** ಪಕ್ಷಿಗಳು ಮಾಡುವ ಶಬ್ದಗಳನ್ನು ವಿವರಿಸಿ - ರೇಖಾಚಿತ್ರವನ್ನು ಮಾಡಲು ಪ್ರಯತ್ನಿಸಿ ಅಥವಾ ಅದರ ಬಗ್ಗೆ ಬರೆಯಿರಿ. ದಿನದ ಸಮಯ ಮತ್ತು ನೀವು ಕೇಳುವ ಪಕ್ಷಿಗಳ ವೈವಿಧ್ಯತೆಯನ್ನು ಗಮನಿಸಿ ಹಾಗೂ ಒಂದು ಗ್ರಾಫ್ ಮಾಡಿ. X ಅಕ್ಷ: ದಿನದ ಸಮಯ, Y ಅಕ್ಷ: ನೀವು ಕೇಳುವ ಪಕ್ಷಿಗಳ ವಿವಿಧ ಕಲರವಗಳ ಸಂಖ್ಯೆ. ಇದನ್ನು 3-5 ದಿನಗಳವರೆಗೆ ಪ್ರಯತ್ನಿಸಿ ಮತ್ತು ಪುನರಾವರ್ತಿಸಿ. ಹಕ್ಕಿಗಳು ದಿನದ ಯಾವ ಸಮಯದಲ್ಲಿ ಹೆಚ್ಚು ಮಾತನಾಡುತ್ತವೆ? ನೀವು ಕೂಡ ಅವರ ಭಾಷೆಯಲ್ಲಿಯೇ ಮಾತನಾಡಲು ಪ್ರಯತ್ನಿಸಿ. ಅವು ಕೂಡ ನಿಮ್ಮ ಜೊತೆ ಮಾತನಾಡುತ್ತವೆಯೇ ಎಂದು ಗಮನಿಸಿ.





**2** ದಿನಕ್ಕೆ 3 ಬಾರಿ ನಿಮ್ಮ ಕಿಟಕಿಯಿಂದ ಹೊರಗೆ ನೋಡಿ - ನಿಮಗೆ ಮೋಡಗಳು ಕಾಣುತ್ತಿವೆಯೇ? ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ಈ ಯಾವ ಸಮಯದಲ್ಲಿ ಮೋಡಗಳು ಇರುತ್ತವೆ ಎಂದು ತೋರಿಸಲು ನೀವು ಒಂದು ಗ್ರಾಫ್ ಅನ್ನು ರಚಿಸಬಹುದೇ? ನೀವು ಯಾವ ರೀತಿಯ ಮೋಡಗಳನ್ನು ನೋಡಿದಿರಿ- ನೀವು ಅವುಗಳ ಚಿತ್ರವನ್ನು ಬಿಡಿಸಬಲ್ಲಿರೆ?


**3** ಬೆಳಕಿನ ಬಲ್ಬ್‌ಗಳು/ಬೆಳಕಿನ ಮೂಲಗಳ ಸುತ್ತಲೂ ಹುಳು-ಕೀಟಗಳು ಏಕೆ ಬಂದು ಸೇರಿಕೊಳ್ಳುತ್ತವೆ? ನಿಮಗೆ ಎಷ್ಟು ರೀತಿಯ ಕೀಟಗಳು ಕಾಣುತ್ತಿವೆ? ಬೇರೆ ಯಾವುದೇ ಪ್ರಾಣಿಗಳು ಅಲ್ಲಿಗೆ ಬರುತ್ತವೆಯೇ? ಒಂದು ಸ್ನೇಹಿತ/ತೆಯನ್ನು ಆಯ್ಕೆ ಮಾಡಿ (ಒಂದು ಕೀಟ/ಪ್ರಾಣಿ), ಅವಕ್ಕೆ ಹೆಸರಿಡಿ ಹಾಗೂ ಮುಂದಿನ ಕೆಲವು ದಿನಗಳಲ್ಲಿ ಅವುಗಳನ್ನು ಗಮನಿಸಿ. ಅವು ಹಿಂತಿರುಗಿ ಅಲ್ಲಿಗೆ ಬರುತ್ತವೆಯೇ? ಅವರ ಬಗ್ಗೆ ಒಂದು ಕವಿತೆ/ಕಥೆ/ಹಾಡನ್ನು ನೀವು ಬರೆಯಬಹುದೇ? ನಿಮ್ಮ ಚುರುಕಾದ ಕಲ್ಪನೆಯನ್ನು ಬಳಸಿ ಹಾಗೂ ನಿಮಗೆ ಇಷ್ಟ ಬಂದಷ್ಟು ರೇಖಾಚಿತ್ರಗಳನ್ನು ಬಳಸಿ!

**4** ಬೇಸಿಗೆಯ ಮುಂಚೆಯೇ, ಅನೇಕ ಮರಗಳು ತಮ್ಮ ಹಳೆಯ ಎಲೆಗಳನ್ನು ಉದುರಿಸಿಕೊಳ್ಳುತ್ತವೆ ಹಾಗೆ ಹೊಸ ಎಲೆಗಳು ಮತ್ತು ಹೂವುಗಳಿಂದ ತಮ್ಮನ್ನು ಅಲಂಕರಿಸಿಕೊಳ್ಳುತ್ತವೆ... ನಿಮ್ಮ ಮನೆಯ ಹತ್ತಿರ ಯಾವುದೇ ಒಂದು ಮರವಿದ್ದರೆ, ಅದು ಯಾವ ಬಣ್ಣವನ್ನು ಧರಿಸಿದೆ ಎಂದು ನೀವು ನೋಡಬಹುದು. ಮರಗಳ ಹೊಸ ಹೂವುಗಳು ಅನೇಕ ಪಕ್ಷಿಗಳು, ಸಣ್ಣ ಪ್ರಾಣಿಗಳು ಮತ್ತು ಕೀಟಗಳನ್ನು ಆಹ್ವಾನಿಸುತ್ತವೆ. ಅವುಗಳಲ್ಲಿ ಯಾವವು ನಿಮಗೆ ಕಾಣಿಸುತ್ತಿವೆ? ನೀವು ಒಂದು ಮರವಾಗಿದ್ದರೆ, ನೀವು ಯಾವ ಬಣ್ಣಗಳನ್ನು ಧರಿಸಲು ಇಷ್ಟ ಪಡುತ್ತೀರಿ? ಹಗಲಿನಲ್ಲಿ ಯಾರೆಲ್ಲಾ ನಿಮ್ಮನ್ನು ಭೇಟಿ ಮಾಡಲು ಬರುತ್ತಿದ್ದರು? ನಿಮ್ಮ ಈ ಎಲ್ಲಾ ಸ್ನೇಹಿತರು ಮತ್ತು ಅವರೊಂದಿಗಿನ ನಿಮ್ಮ ಮಾತು-ಕತೆಯ ಬಗ್ಗೆ ನೀವೇ ಒಂದು ಕಥೆಯನ್ನು ಬರೆಯಿರಿ.

**5** ನಿಮಗೂ ಕೂಡ ಜೇಡದಂತೆ 8 ಕಣ್ಣುಗಳು, 8 ಕಾಲುಗಳು ಇವೆ ಎಂದು ಯೋಚಿಸಿ. ನಿಮ್ಮ ಜೀವನ ಇದರಿಂದ ಹೇಗೆ ಬದಲಾಗುತ್ತದೆ? ನೀವು ಹೊಸ ಕನ್ನಡಕಗಳನ್ನು ಕೊಳ್ಳಬೇಕೆ? ನಿಮ್ಮ ಬಟ್ಟೆಗಳು ಹೇಗಿರಬಹುದು? ಇದನ್ನು ಊಹಿಸಿಕೊಂಡು ಚಿತ್ರ ಬಿಡಿಸಿರಿ ಅಥವಾ ಚಿತ್ರ ಕಥೆಯನ್ನು ತಯಾರಿಸಿ.



ನೇಚರ್ ಕ್ಲಾಸ್‌ರೂಮ್‌ನಿಂದ ರಚಿಸಲಾಗಿದೆ, ಮಕ್ಕಳು ಮತ್ತು ವಯಸ್ಕರನ್ನು ಪ್ರಕೃತಿಗೆ ಪರಿಚಯಿಸಲು ಲಾಭರಹಿತ ಉಪಕ್ರಮ. ಇನ್ನಷ್ಟು ತಿಳಿಯಲು, ಭೇಟಿ ನೀಡಿ: bit.ly/natureframework ಅನುವಾದ: ಅದಿತಿ ರಾವ್
This work is licensed under CC BY-SA 4.0 https://creativecommons.org/licenses/by-sa/4.0/



**6** ನಿಮ್ಮ ಪ್ರಕಾರ ಬೆಳ್ಳಿ ಹುಳು ಎಂಬ ಈ ಹೆಸರು ಇದಕ್ಕೆ ಏಕೆ ಬಂತು? ಅವು ಹೇಗೆ ಚಲಿಸುತ್ತವೆ? ನೀವು ಕೂಡ ಅವುಗಳಂತೆ ಚಲಿಸಲು ಪ್ರಯತ್ನಿಸಬಹುದೇ? ನಿಮಗೆ ಈ ಕೀಟಕ್ಕೆ ಇನ್ನೊಂದು ಹೆಸರನ್ನು ಕೊಡಬೇಕು ಎಂದರೆ, ಯಾವ ಹೆಸರನ್ನು ಕೊಡುತ್ತೀರಿ ಹಾಗೂ ಏಕೆ?

**7** ನಿಮ್ಮ ಮನೆಯಲ್ಲಿ ಗುಂಗಾಡಿ/ಹಣ್ಣಿನ ನೊಣಗಳು ಎಲ್ಲಿ ಕಾಣಿಸುತ್ತವೆ? ಅವು ದಿನದ ಯಾವ ಸಮಯದಲ್ಲಿ ಬರುತ್ತವೆ ಮತ್ತು ಏನು ಮಾಡುತ್ತವೆ ಎಂಬುದನ್ನು ಪಟ್ಟಿ ಮಾಡಿ. ನಿಮ್ಮ ಮನೆಯಲ್ಲಿ ನೀವು ಒಂದು ಹಣ್ಣಿನ ನೊಣವಾಗಿದ್ದರೆ, ನೀವು ನೋಡುವ, ವಾಸನೆ ಗ್ರಹಿಸುವ ಮತ್ತು ರುಚಿ ನೋಡುವ ಕೆಲವು ವಸ್ತುಗಳು ಯಾವುವು? ಇದರ ಬಗ್ಗೆ ಒಂದು ಕಥೆಯನ್ನು ಬರೆಯಿರಿ ಅಥವಾ ಚಿತ್ರ-ಕಥೆಯನ್ನು ರಚಿಸಿ.

**8** ಅಕ್ಕಿ ಹುಳುಗಳು (ಓಡು ಹುಳಗಳು) ಎಲ್ಲಿಂದ ಬರುತ್ತವೆ? ಇವು ಬೇಳೆ, ಅಕ್ಕಿ, ಹಿಟ್ಟಿನ ಪ್ಯಾಕೆಟ್‌ಗಳಲ್ಲಿ / ಕಂಟೈನರ್‌ಗಳಲ್ಲಿ ಏನು ಮಾಡುತ್ತಿರುತ್ತವೆ? ಅವುಗಳನ್ನು ಹತ್ತಿರದಿಂದ ನೋಡಿ - ಅವು ಯಾವ ಬಣ್ಣ, ಗಾತ್ರ, ಆಕಾರವನ್ನು ಹೊಂದಿವೆ?ನಿಮ್ಮ ಪ್ರಕಾರ ಈ ಅಕ್ಕಿ ಹುಳುಗಳಿಗೆ ನೆಚ್ಚಿನ ಆಹಾರ ಎಂದು ಇರಬಹುದೇ? ಇವುಗಳಿಗಾಗಿ ಒಂದು ರುಚಿಯಾದ ತಿಂಡಿಯ ಪಾಕವಿಧಾನವನ್ನು ರಚಿಸಿ.

**9** ನೀವೊಂದು ಹಲ್ಲಿಹುಡುಗಿ/ ಹಲ್ಲಿಹುಡುಗ/ ಹಲ್ಲಿಕಿಡ್ ಎಂಬ ಸೂಪರ್ ಹೀರೋ ಎಂದು ಕಲ್ಪಿಸಿಕೊಳ್ಳಿ! ನಿಮ್ಮ ಸೂಪರ್ ಶಕ್ತಿಗಳು ಯಾವುವು? ನೀವು ಏನು ತಿನ್ನುತ್ತೀರಿ ಮತ್ತು ಕುಡಿಯುತ್ತೀರಿ? ನಿಮ್ಮ ವೇಷಭೂಷಣ ಹೇಗಿರುತ್ತದೆ? ನೀವು ಅಪರಾಧದ ವಿರುದ್ಧ ಹೋರಾಡುತ್ತೀರಾ? ಹೀಗೆ ವೇಷ ಹಾಕಿಕೊಂಡು ನಿಮ್ಮ ಕುಟುಂಬದವರ ಎದುರಿಗೆ ಒಂದು ಭಾಷಣ ಮಾಡಿ!



ನೇಚರ್ ಕ್ಲಾಸ್‌ರೂಮ್‌ನಿಂದ ರಚಿಸಲಾಗಿದೆ, ಮಕ್ಕಳು ಮತ್ತು ವಯಸ್ಕರನ್ನು ಪ್ರಕೃತಿಗೆ ಪರಿಚಯಿಸಲು ಲಾಭರಹಿತ ಉಪಕ್ರಮ. ಇನ್ನಷ್ಟು ತಿಳಿಯಲು, ಭೇಟಿ ನೀಡಿ: bit.ly/natureframework ಅನುವಾದ: ಅದಿತಿ ರಾವ್
This work is licensed under CC BY-SA 4.0 https://creativecommons.org/licenses/by-sa/4.0/